# ನವೆಂಬರನಲ್ಲಿ ನಡೆಯುವ ಕೆರೆ ಸಮ್ಮೇಳನದ ಕುರಿತು ಮಾಹಿತಿ ಸಭೆ

ಶಿರಸಿ: ನವೆಂಬರ 13,14,15 ರಂದು ನಡೆಯುವ ಕೆರೆ ಸಮ್ಮೇಳನದ ಕುರಿತು ಮಾಹಿತಿ ಸಭೆಯು ಸಿದ್ದಾಪುರ ತಾಲೂಕಿನ ಹೇರೂರಿನ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ಸೋಮವಾರ ಮಧ್ಯಾಹ್ನ ನಡೆಯಿತು.

ದೇವಸ್ಥಾನ ಸಮಿತಿ ಅಧ್ಯಕ್ಷ ಪಿ.ಎಂ ಭಟ್ಟ ಹೊಸ್ತೋಟ ಅಧ್ಯಕ್ಷತೆ ವಹಿಸಿ ಮಾತನಾಡಿ, ಕೆರೆ–ಹಳ್ಳ–ನದಿಗಳ ಹರಿವು ನಿರಂತರವಾಗಿ ಇರಲು ಸುತ್ತಲಿನ ಪರಿಸರ ಸದೃಢವಾಗಿ ಇರಬೇಕು ಎನ್ನುತ್ತಾ ತಮ್ಮ ಅನುಭವವನ್ನು ಹಂಚಿಕೊಂಡರು.

ದೇವಸ್ಥಾನ ಸಮಿತಿಯ ಕಾರ್ಯದರ್ಶಿ ನರಹರಿ ಕುಳಿಮನೆ ಇವರು ಪ್ರಾಸ್ತಾವಿಕವಾಗಿ ಮಾತನಾಡಿ, ದೇವಸ್ಥಾನದ ಕೆರೆಯ ಹೂಳೆತ್ತುವ ಕಾರ್ಯವನ್ನು ಈ ಹಿಂದೆ ಮಾಡಲಾಗಿತ್ತು. ದೇವಸ್ಥಾನದ ಎದುರುಗಿರುವ ಗುಡ್ಡದಲ್ಲಿ ವನ ನಿರ್ಮಾಣದಿಂದಾಗಿ ಕೆರೆಯಲ್ಲಿ ಜಲದ ಪ್ರಮಾಣ ಜಾಸ್ತಿಯಾಗಿದೆ. ಈಗ ಮತ್ತೆ ನಾವೆಲ್ಲ ಈ ಸಮ್ಮೇಳನದ ಮೂಲಕ ಸ್ವಯಂ ಪ್ರೇರಿತರಾಗಿ ಅಭಿವೃದ್ಧಿ ಮಾಡುವ ಸಂದರ್ಭ ಬಂದಿದೆ ಎನ್ನುತ್ತಾ ಕೆರೆಯ ಸುತ್ತಲ ವನೀಕರಣದ ಮಾಹಿತಿ ನೀಡಿದರು.

ಕೆರೆ ಸಮ್ಮೇಳನ – 2014 ರ ಮಹತ್ವ ಹಾಗೂ 3 ದಿನಗಳ ಗೋಷ್ಠಿಗಳಲ್ಲಿ ನಡೆಯುವ ವಿಚಾರಗಳ ಬಗ್ಗೆ ವೃಕ್ಷಲಕ್ಷ ಆಂದೋಲನದ ಗಣಪತಿ ಕೆ. ಬಿಸಲಕೊಪ್ಪ ಮಾಹಿತಿ ನೀಡಿದರು. ರೈತ ಬಾಂಧವರು, ಗ್ರಾಮ ಅರಣ್ಯ ಸಮಿತಿ ಸದಸ್ಯರು, ದೇವಸ್ಥಾನಗಳ ಆಡಳಿತ ಮಂಡಳಿಯ ಸದಸ್ಯರುಗಳು ಕೆರೆ ಸಂರಕ್ಷಣೆಯ ಬಗ್ಗೆ ಆಸಕ್ತಿ ವಹಿಸಿ ಈ ಕಾರ್ಯಾಗಾರಕ್ಕೆ ಬರಲು ಆಹ್ವಾನಿಸಿದರು.

ಸಭೆಯಲ್ಲಿ ಗಣೇಶ ಎನ್. ಹೇರೂರು, ಜಿ.ಎಂ ಹೆಗಡೆ ಹೆಗ್ನೂರು, ಆರ್.ಎಸ್ ಭಟ್ಟ ಬಾಳೇಸರ, ಎಂ.ಪಿ ಹೆಗಡೆ ನಂದೀಕಲ್, ನರಸಿಂಹಮೂರ್ತಿ ತ್ಯಾರಗಲ್, ವಿಶ್ವೇಶ್ವರ ಹೆಗಡೆ ಹುಲಿಮನೆ, ರಾಜು ಹೆಗಡೆ ಕಂಚಿಕೈ, ಬಾಲಚಂದ್ರ ಹೆಗಡೆ ಹೂಡ್ಲಮನೆ, ಎಂ.ಎಸ್ ಹೆಗಡೆ ಐನಬೈಲ್ ಮುಂತಾದ ಪ್ರಮುಖರು ಇದ್ದರು.

ಸಭೆಯಲ್ಲಿ ಹೇರೂರು, ಕಿಬ್ಬಳ್ಳಿ, ಶಮೆಮನೆ, ಬಾಳೇಸರ, ಗೋಳಿಮಕ್ಕಿ, ತಟ್ಟಿಕೈ ಹಾಗೂ ಸುತ್ತಲ ಊರಿನ ರೈತರು, ಮಾತೆಯರು ಭಾಗವಹಿಸಿದ್ದರು. ಗೋಪಾಲಕೃಷ್ಣ ತಂಗಾರಮನೆ ಸ್ವಾಗತಿಸಿ ವಂದಿಸಿದರು.

Karavalimunjavu_28-10-2014-Page3